ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.294/2018,

ಚಾಸಾ-16 , ಫ್ರಾಸಾ -7

| | |
|---|---|
| ಹೆಸರು | ರಾಜೇಶ್ |
| ತಂದೆಯ ಹೆಸರು | ರಾಮಕೃಷ್ಣ |
| ವಯಸ್ಸು | 54 ವರ್ಷ |
| ಕೆಲಸ | ಎ.ಎಸ್.ಐ |
| ವಾಸ | ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 10-09-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ನಾನು ಮಾರ್ಚ-2015 ರಿಂದ ಇಲ್ಲಿಯವರೆಗೆ ಮೂಡಬಿದ್ರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 18-11-2017 ರಂದು ಅಪರಾಧ ವಿಭಾಗದ ನಾನು ಮತ್ತು ಸಿಬ್ಬಂದಿಗಳಾದ ಚಾಸಾ- 12 ರಿಂದ ಚಾಸಾ-15 ರವರ ಜೊತೆ ಪತ್ತೆ ಕಾರ್ಯದಲ್ಲಿ ಇದ್ದಾಗ ಬೆಳಿಗ್ಗೆ 8-15 ಗಂಟೆಗೆ ಸಮಯದಲ್ಲಿ , ನನಗೆ ಬಂದ ಖಚಿತ ವರ್ತಮಾನದ ಮೇರೆಗೆ ಒಬ್ಬ ವ್ಯಕ್ತಿ ಮಾರ್ಪಾಡಿ ಗ್ರಾಮದ ಮರಿಯಾಡಿ ಎಂಬಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿದ್ದಾನೆ ಎಂದು ಬಂದ ಮಾಹಿತಿಯ ಮೇರೆಗೆ ನಾವು ಇಲಾಖಾ ವಾಹನದಲ್ಲಿ 8-15 ಗಂಟೆಗೆ ಠಾಣೆಯಿಂದ ಹೊರಟು 8-30 ಗಂಟೆಗೆ ಮಾಹಿತಿದಾರರು ಹೇಳಿದ ಸ್ಥಳಕ್ಕೆ ತಲುಪಿದಾಗ , ಮಾಹಿತಿದಾರರು ಗುರುತು ಹೇಳಿದ ಚಹರೆಯ ವ್ಯಕ್ತಿ ಅಲ್ಲಿ ಇದ್ದು , ನಾನು ಹಾಗೂ ಆತನನ್ನು ವಿಚಾರಿಸಿದಾಗ , ಆತನು ತನ್ನ ಹೆಸರು ಲೋಕೇಶ್ ಶೆಟ್ಟಿಗಾರ್ , ಬಡಗ ಎಡಪದವು ಗ್ರಾಮ ಎಂಬುದಾಗಿ ತಿಳಿಸಿದ್ದು , ಪುನಃ ಆತನು

ಸಮರ್ಪಕವಾದ ಉತ್ತರವನ್ನು ನೀಡದೆ ಇದ್ದ ಕಾರಣ ಆತನನ್ನು ನಾನು ಹಾಗೂ ಚಾಸಾ-17 ರಿಂದ ಚಾಸಾ-19 ರವರು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು , ಚಾಸಾ-22 ರವರ ಮುಂದೆ ಹಾಜರು ಪಡಿಸಿರುತ್ತೇವೆ . ಆತನನ್ನು ಚಾಸಾ-22 ಹಾಗೂ ನಾವುಗಳು ಕೂಲಂಕುಷವಾಗಿ ವಿಚಾರಣೆಗೆ ಒಳಪಡಿಸಿದಾಗ , ಆತನು ಮೂಡಬಿದ್ರೆ ಠಾಣಾ ಸರಹದ್ದಿನಲ್ಲಿ ಈ ಹಿಂದೆ ದಾಖಲಾದ 5 ಪ್ರಕರಣಗಳಲ್ಲಿ ಕಳುವನ್ನು ತಾನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಲ್ಲದೆ , ಕಳವು ಮಾಡಿದ ಒಡವೆ ಹಾಗೂ ವಸ್ತುಗಳನ್ನು ತಾನು ಬಚ್ಚಿಟ್ಟ ಸ್ಥಳ ಹಾಗೂ ಮಾರಾಟ ಮಾಡಿದ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿರುತ್ತಾನೆ .

ಆ ಮೇರೆಗೆ ಚಾಸಾ-22 ರವರ ಜೊತೆ ನಾನು , ಆರೋಪಿ ಹಾಗೂ ಅಪರಾಧ ವಿಭಾಗದ ಸಿಬ್ಬಂದಿಗಳು, ಪಂಚರು ಹಾಗೂ ಬಂಗಾರವನ್ನು ಪರಿಶೀಲಿಸುವ ಚಾಸಾ-7 ರವರೊಂದಿಗೆ ಠಾಣೆಯಿಂದ ಹೊರಟಿದ್ದು , ಆರೋಪಿಯು ನೇರವಾಗಿ ನಮ್ಮನ್ನು ಕರೆದುಕೊಂಡು , ಆತನ ಮನೆಯಾದ ಮಂಗಳೂರು ತಾಲೂಕಿನ ಬಡಗ ಎಡಪದವಿನ ಉರ್ಕಿ ಎಂಬಲ್ಲಿಯ ತನ್ನ ವಾಸದ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ಆತನ ಮನೆಯ ಪಕ್ಕದಲ್ಲಿ ಇರುವ ಒಂದು ಶೆಡ್ ನ ಒಳಗೆ ಕರೆದುಕೊಂಡು ಹೋಗಿ ಅಲ್ಲಿ ಹಂಚಿನ ತುಂಡುಗಳ ಮಧ್ಯದಲ್ಲಿ ಅಡಗಿಸಿಟ್ಟಿದ್ದ ಕೆಲವು ಬಂಗಾರದ ಒಡವೆಗಳು ಹಾಗೂ ಮೊಬೈಲ್ ಫೋನ್ ಗಳನ್ನು ತೆಗೆದು ಹಾಜರು ಪಡಿಸಿರುತ್ತಾನೆ . ಅವುಗಳನ್ನು ಮಹಜರ್ ಮುಖೇನಾ ಸ್ವಾಧೀನ ಪಡಿಸಿಕೊಂಡಿರುತ್ತೇವೆ . ಸದರಿ ಮಹಜರನ್ನು ನಾನೇ ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ , ಜೊತೆಯಲ್ಲಿ ತೆಗೆದುಕೊಂಡು ಹೋದ ಪ್ರಿಂಟರಿನಲ್ಲಿ ಪ್ರಿಂಟ್ ತೆಗೆದಿರುತ್ತೇನೆ . ಸಾಕ್ಷಿ ನಿಪಿ-4 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಸದರಿ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ , ಫೋಟೋಗಳನ್ನು ನಿಪಿ-7 ಎಂದು ಗುರುತಿಸಲಾಯಿತು . ನಂತರ ಆರೋಪಿಯು ಕೆಲವೊಂದು ಬಂಗಾರವನ್ನು ಮಾರಾಟ ಮಾಡಿರುವುದನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ನಮ್ಮನ್ನು ಮತ್ತು ಬಂಗಾರವನ್ನು ತೂಕ ಮಾಡುವ ಚಾಸಾ-7 ರವರನ್ನು ಕರೆದುಕೊಂಡು ಮಂಗಳೂರು ತಾಲೂಕು ಕೈಕಂಬ ಸುಶೀಲ್ ಜುವೆಲರ್ಸ್ ಎಂಬ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ . ಇದೇ ಅಂಗಡಿಯಲ್ಲಿ ಬಂಗಾವನ್ನು ಮಾರಾಟ ಮಾಡಿರುವುದಾಗಿ ಆರೋಪಿ ತಿಳಿಸಿದ್ದು , ಅಂಗಡಿಯಲ್ಲಿ ಇದ್ದ ಚಾಸಾ-13 ರವರನ್ನು ವಿಚಾರಿಸಿದಾಗ , ಅವರು ಆರೋಪಿಯು ತಂದು ಕೊಟ್ಟ ಬಂಗಾರದ ಒಡವೆಗಳನ್ನು ಸ್ವೀಕರಿಸಿದ್ದಾಗಿ ಒಪ್ಪಿಕೊಂಡಿದ್ದು , ಭದ್ರತೆಯ ದೃಷ್ಠಿಯಿಂದ ಅವುಗಳನ್ನು ಬೇರೆ ಕಡೆ ಇಟ್ಟಿರುವುದಾಗಿ ತಿಳಿಸಿ , ಚಾಸಾ-22 ರವರಲ್ಲಿ ಆ ಬಂಗಾರದ ಒಡವೆಗಳನ್ನು ತಂದು ಠಾಣೆಗೆ ಒಪ್ಪಿಸುವುದಾಗಿ ತಿಳಿಸಿದ್ದು , ಅದರಂತೆ ಸದರಿ ಸ್ಥಳದಲ್ಲಿ ಮಹಜರನ್ನು ಬರೆದಿರುತ್ತೇನೆ . ಸದರಿ ಮಹಜರನ್ನು ನಾನೇ ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿರುತ್ತೇನೆ . ಸಾಕ್ಷಿ ನಿಪಿ-6 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು .

ನಂತರ ಆರೋಪಿಯೊಂದಿಗೆ ಠಾಣೆಗೆ ವಾಪಸ್ಸು ಬಂದಿದ್ದು , ರಾತ್ರಿ ಸುಮಾರು 20-00 ಗಂಟೆ ಸಮಯಕ್ಕೆ ಸುಶೀಲ್ ಜ್ಯೂವೆಲರಿ ಅಂಗಡಿಯ ಮಾಲೀಕರು ತಾನು ಆರೋಪಿಯಿಂದ ಖರೀದಿಸಿದ ಬಂಗಾರದ ಒಡವೆಗಳನ್ನು ಠಾಣೆಗೆ ಬಂದು ಹಾಜರು ಪಡಿಸಿದ್ದು , ಆ ಸಮಯದಲ್ಲಿ ಪಂಚರನ್ನಾಗಿ ಚಾಸಾ-8 ಮತ್ತು ಚಾಸಾ-9 ಠಾಣೆಗೆ ಬರಮಾಡಿಕೊಂಡು , ಸದರಿ ಬಂಗಾರದ ಒಡವೆಗಳನ್ನು ರಾತ್ರಿ 20-30 ರಿಂದ 21-30 ಗಂಟೆಯವರೆಗೆ ಮಹಜರು ಮುಖೇನಾ ಸ್ವಾಧೀನ

ಪಡಿಸಿಕೊಂಡಿರುತ್ತಾರೆ . ಈ ಮಹಜರನ್ನೂ ಸಹ ನಾನು ಲ್ಯಾಪ್ ಟ್ಯಾಪ್ ನಲ್ಲಿ ಬೆರಳಚ್ಚು ಮಾಡಿ ಠಾಣೆಯಲ್ಲಿ ಪ್ರಿಂಟ್ ತೆಗೆದು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಸಾಕ್ಷಿ ನಿಪಿ-5 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-7 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ . ತನಿಖಾ ಸಮಯದಲ್ಲಿ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

ಠಾಣೆಯಿಂದ ಆರೋಪಿಯ ಮನೆಗೆ ಹೋಗುವಾಗ ಬೆಳಿಗ್ಗೆ 11-00 ಗಂಟೆಯಾಗಿರುತ್ತದೆ. ಆರೋಪಿಯ ಮನೆಯಿಂದ ನೇರವಾಗಿ ಸುಶೀಲ್ ಜುವೆಲರ್ಸ್ ಗೆ ಹೋದೆವು . ಆರೋಪಿಯ ಮನೆಯಿಂದ ಸುಶೀಲ್ ಜುವೆಲರ್ಸ್ ಗೆ ಹೋಗಲು ಸುಮಾರು 15 ನಿಮಿಷಗಳು ಸಾಕು . ಸುಶೀಲ್ ಜುವೆಲರ್ಸ್ ಗೆ ತಲುಪುವಾಗ ಸುಮಾರು 12-00 ರಿಂದ 12-30 ಗಂಟೆಯಾಗಿತ್ತು . ಸುಶೀಲ್ ಜುವೆಲರ್ಸ್ ನಲ್ಲಿ 12-30 ರಿಂದ 1-30 ಗಂಟೆಯವರೆಗೆ ಇದ್ದೆವು . ಆ ನಂತರ ಪುನಃ ಪೊಲೀಸ್ ಠಾಣೆಗೆ ಹಿಂದಿರುಗಿದೆವು . ಆರೋಪಿತರ ಮನೆಯಿಂದ ಹೊರಡುವಾಗಿ ಸುಮಾರು 11-45 ಗಂಟೆಯಾಗಿತ್ತು . ನಿಪಿ-14 ಆರೋಪಿಯ ಮನೆಯ ಫೋಟೋ ಆಗಿರುತ್ತದೆ. ಆರೋಪಿಯ ಮನೆಯಿಂದ ಯಾವುದೇ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ . ಶೆಡ್ ಮನೆಯಿಂದ 8 ಅಡಿ ದೂರದಲ್ಲಿ ಇದೆ . ಶೆಡ್ಡಿನ ಒಳಗೆಡೆ ಬಲಬದಿಯಲ್ಲಿ ಹಂಚಿನ ರಾಶಿ ಇತ್ತು . ಹಂಚಿನ ರಾಶಿಯೊಳಗಡೆ ಒಂದು ಪ್ಲಾಸ್ಟಿಕ್ ಕವರ್ ಇತ್ತು . ಆ ಪ್ಲಾಸ್ಟಿಕ್ ಕವರಿ ಒಳಗೆ ಚಿನ್ನ ಮತ್ತು ಮೊಬೈಲ್ ಇತ್ತು . ಇದನ್ನು ಮಹಜರಿನಲ್ಲಿ ನಮೂದು ಮಾಡಿದ್ದೇನೆ . ಚಿನ್ನ ಇದ್ದಂತಹ ಪ್ಲಾಸ್ಟಿಕ್ ಕವರ್ ನ್ನೂ ಸಹ ನಾವು ಸ್ವಾಧೀನ ಪಡಿಸಿಕೊಂಡಿದ್ದೇವೆ . ಆರೋಪಿಯ ಮನೆಗೆ ಮತ್ತು ಸುಶೀಲ್ ಜುವೆಲರಿ ಅಂಗಡಿಗೆ ಹೋದ್ದದ್ದೆ ಇಲ್ಲ ಎಂದರೆ ಸರಿಯಲ್ಲ .

ಆರೋಪಿಯ ಮನೆಯ ಶೆಡ್ಡಿನಿಂದ ಚಿನ್ನ ಮತ್ತು ಮೊಬೈಲನ್ನು ಸ್ವಾಧೀನ ಪಡಿಸಿ ಕೊಂಡಿದ್ದೇವೆ ಎಂದು ನಾವು ಹೇಳುವುದು ಸುಳ್ಳು ಎಂದರೆ ಸರಿಯಲ್ಲ . ಆರೋಪಿಯ ಮನೆಯ ಬಳಿ ಮತ್ತು ಸುಶೀಲ್ ಜ್ಯುವೇಲರ್ಸ್ ನ ಬಳಿ ಮಹಜರನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ . ನಿಪಿ-5 ಮತ್ತು ನಿಪಿ-6 ನ್ನು ಠಾಣೆಯಲ್ಲಿಯೇ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ . ನಾವು ಪೊಲೀಸ್ ಠಾಣೆಗೆ ಬಂದ ನಂತರ ಸುಶೀಲ್ ಜ್ಯುವೇಲರ್ಸ್ ನ ಮಾಲೀಕರು ರಾತ್ರಿ 8-00 ಗಂಟೆಗೆ ಠಾಣೆಗೆ ಬಂದಿರುತ್ತಾರೆ . ಸುಶೀಲ್ ಜ್ಯುವೇಲರ್ಸ್ ನ ಮಾಲೀಕರು ನಮ್ಮ ಠಾಣೆಗೆ ಚಿನ್ನವನ್ನು ತಂದು ಕೊಟ್ಟರು ಎಂದು ಹೇಳುವುದು ಸರಿಯಲ್ಲ . ಆ ಸಮಯದಲ್ಲಿ ಮಹಜರನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ